


# ಪುಸ್ತಕಗಳ ಹೋಟೆಲ್!

ನೀವು ಪೋರ್ಚುಗಲ್ಲಿನ ಒಬಿಡೋಸ್ ಹಳ್ಳಿಗೆ ಭೇಟಿ ನೀಡಿದರೆ ನಿಮಗೆ ಖಂಡಿತಾ ಬೋರ್ ಆಗುವುದೇ ಇಲ್ಲ! ಇಲ್ಲಿರುವ ದಿ ಲಿಟರರಿ ಮ್ಯಾನ್ ಹೋಟೆಲ್ ನಲ್ಲಿ ರೂಮನ್ನು ಬುಕ್ ಮಾಡಿದರೆ ಸಾಕು! ಈ ಹೋಟೆಲ್ ನಿಜಕ್ಕೂ ಪುಸ್ತಕ ಪ್ರಿಯರ ಸ್ವರ್ಗ! ಇಲ್ಲಿರುವ ಅಗಾಧ ಪುಸ್ತಕ ರಾಶಿಯಲ್ಲಿ ನೀವು ನಿಮಗಿಷ್ಟವಾದುದನ್ನು ಕೈಗೆತ್ತಿಕೊಂಡು ಓದಬಹುದು.

2015 ರಲ್ಲಿ ಪ್ರಾರಂಭವಾದ ಈ ವಿಶಿಷ್ಟ ಹೋಟೆಲ್ ಇಡೀ ವಿಶ್ವದಲ್ಲಿ, ಸಾಹಿತ್ಯಪ್ರಿಯರ ಅತ್ಯುತ್ತಮ ಹೋಟೆಲ್ ಎಂದೇ ಪ್ರಸಿದ್ಧಿ ಪಡೆದಿದೆ. ಇಲ್ಲಿರುವ ಬಹಳಷ್ಟು ಪುಸ್ತಕಗಳು ಇಂಗ್ಲಿಷ್ ಭಾಷೆಯಲ್ಲಿವೆ. ಪುಸ್ತಕ ಸಂಗ್ರಹಣೆಯು ದಿನೇ ದಿನೇ ಹೆಚ್ಚಾಗುತ್ತಲೇ ಇರುವುದು ಇಲ್ಲಿನ ಮತ್ತೊಂದು ವೈಶಿಷ್ಟ್ಯ. ದಿ ಲಿಟರರಿ ಮ್ಯಾನ್ ಹೋಟೆಲ್‌ನ ಒಳಗಡಿ ಇರಿಸಿದರೆ ವಾಸ್ತವಿಕವಾಗಿ ಪುಸ್ತಕಗಳೇ ಎಲ್ಲೆಲ್ಲೂ ಕಾಣಬರುತ್ತವೆ. ದೊಡ್ಡದಾದ ಮೊಗಸಾಲೆ (ಲಾಂಜ್)ಯಲ್ಲಿ, 30 ಮಲಗುವ ಕೋಣೆಗಳಲ್ಲಿ, ಜಿಮ್ ಬಾರ್ ನಲ್ಲಿ, ಹಳೆ ವೈನ್ ಸೆಲ್ಲರ್ ಮುಂತಾದ ಕಡೆಗಳಲ್ಲಿ ಪುಸ್ತಕಗಳನ್ನು ಇಡಲಾಗಿದೆ. ಕಾದಂಬರಿಗಳು, ಕವನ ಸಂಕಲನಗಳು, ಪಾಕ ಪುಸ್ತಕಗಳು, ಅಪರೂಪವಾದ ಪುಸ್ತಕಗಳು, ಅತ್ಯಂತ ಹಳೆ ಪುಸ್ತಕಗಳು.. ಹೀಗೆ 50,000 ಕ್ಕೂ ಹೆಚ್ಚು ಪುಸ್ತಕಗಳಿವೆ.

ಅಕಸ್ಮಾತ್ ಆಗಿ ಅತ್ಯುತ್ತಮವಾದ ಪುಸ್ತಕವನ್ನು ನೀವು ಅಲ್ಲಿ ಉಳಿದುಕೊಂಡಿರುವ ಸಮಯದಲ್ಲಿ ಓದಿ ಮುಗಿಸಲಾಗದಿದ್ದರೆ ಏನು ಮಾಡುವುದು ಎಂಬ ಚಿಂತೆಯೇ ಬೇಡ. ಏಕೆಂದರೆ ನೀವು ಅದನ್ನು ಅಲ್ಲಿಯೇ ಖರೀದಿಸಿ ಮನೆಗೆ ತೆಗೆದುಕೊಂಡು ಹೋಗಬಹುದು. ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರು ಪುಸ್ತಕಗಳನ್ನು ತೆಗೆದುಕೊಂಡು ಹೋಗುವುದಕ್ಕಿಂತ ಮಿಗಿಲಾಗಿ ಹೋಟೆಲ್‌ನ ಸಂಗ್ರಹಣೆಗೆ ಕೊಡುಗೆ ನೀಡುವವರೇ ಹೆಚ್ಚಾಗಿದ್ದಾರೆ. ನಮ್ಮಲ್ಲಿಗೆ ಬರುವ ಅತಿಥಿಗಳು ತಮ್ಮ ಸ್ವಂತ ಪುಸ್ತಕಗಳನ್ನು ನಮ್ಮ ಸಂಗ್ರಹಣೆಗೆ ಬಲು



ಪ್ರೀತಿಯಿಂದ ಉಡುಗೊರೆಯಾಗಿ ನೀಡುತ್ತಾರೆ. ಯಾರ ಬಳಿ ಪುಸ್ತಕಗಳಿರುವುದಿಲ್ಲವೋ ಅವರು ತಮ್ಮೂರಿಗೆ ಮರಳಿದ ನಂತರ ದೇಣಿಗೆ ರೂಪದಲ್ಲಿ ಕಳಿಸುತ್ತಾರೆ ಎಂದು ಆ ಹೋಟೆಲ್ ನ ಪ್ರತಿನಿಧಿಯೊಬ್ಬರು ಪತ್ರಿಕಾ ಸಂದರ್ಶನದಲ್ಲಿ ನುಡಿದಿದ್ದಾರೆ.

ಇಲ್ಲಿ ಪುಸ್ತಕ ಸಂಗ್ರಹಣೆ ಎಷ್ಟು ವೇಗವಾಗಿ ಬೆಳೆಯುತ್ತಿದೆಯೆಂದರೆ ಸದ್ಯದಲ್ಲೇ ಇವುಗಳ ಸಂಖ್ಯೆ 1,00,000 ಆಗಲಿದೆಯಂತೆ. ಓದುವ ಥೀಮ್ ಇರುವ ಹೋಟೆಲ್ ಗಳು ಪ್ರಪಂಚದಾದ್ಯಂತ ಹಲವಾರು ಇವೆ. ಆದರೆ ದಿ ಲಿಟರರಿ ಮ್ಯಾನ್ ಹೋಟೆಲ್‌ನಲ್ಲಿ ಮಾತ್ರ ಪುಸ್ತಕಗಳ ಬೃಹತ್ ಸಂಗ್ರಹವಿದೆ.

■ ವಿದ್ಯಾ ವಿ. ಹಾಲಭಾವಿ